



‘ಅಯ್ಯೋ! ಇಷ್ಟ್ಯಾಕ ಹೌಹಾರಿದ್ರಿ. ಹೌದು ತಿರುಗಿ ನೋಡಲಾರದ ಮಹಾರಾಣಿ ಈಗ್ಯಾಕ ಫೋನ್ ಮಾಡಿದಳೋ?’

‘ನನಗೂ ಗೊತ್ತಿಲ್ಲ. ವಿಚಾರಿಸ್ತಿನಿ... ಮೋಸ್ಟಲಿ ಕಾಲೇಜ್ ಗ್ರೂಪ್‌ನಲ್ಲಿ ನಂಬರ್ ಸಿಕ್ಕಿರಬೇಕು, ಮಾಡಿರಬೇಕು.’

‘ಆಕಿ ಫೋನ್ ನಂಬರ್ ಕೊಡಿ ನಾನೇ ವಿಚಾರಿಸ್ತಿನಿ’.

‘ಬೇಡಾನೆ ಏನಾದರೂ ಅಂದಿದಿ. ಈಗ ತಾನೆ ಕಾಲ್ ಮಾಡಿದ್ದಾಳೆ, ಸಂಬಂಧ ಮುರಿಬೇಡ’.

‘ಹಾಂ..!..ಎಷ್ಟು ನುಲಿಯಾಕತಿರಿ. ಇಪ್ಪತ್ತೈದು ವರ್ಷದಿಂದ ಅವಳ ಇದ್ದಳಾ?’

‘ಆಯ್ತು ತಾಯಿ... ನಿನ್ನ ಸಂಗಡ ವಾದ ಮಾಡೋಕಾಗುತ್ತಾ? ಮಾತಾಡತಿಯಲ್ಲ ಮೆಲ್ಲಕ ಮಾತಾಡು.’

‘ಆಯ್ತು ಮೊದಲು ಜಾಗ ಖಾಲಿ ಮಾಡಿ’ ಎಂದ್ಲು.

‘ನನ್ನ ಮುಂದೆನ ಮಾಡೆ...’

‘ ಹ್ಞಂ’ ಅಂತ ಗುರಾಯಿಸಿದಳು.

‘ಆಯ್ತು ಮಹರಾಯ್ತಿ ಏನರ ಮಾಡಿಕೊ’ ಎಂದು ಕಾಲ್ಕಿತ್ತಿದ್ದ. ಹಿಂಗ್ ಕಾಲ್ ಬಂದದ್ದು ವ್ಯಾಟ್ಸಾಪ್ ಮೂಲಕ ಚಾಟ್ ಮಾಡುವುದರಲ್ಲಿ ಮುಂದುವರೆಯಿತು. ಸ್ನೇಹ ಮತ್ತೆ ಚಿಗುರಿ ಬೆಳೆಯಿತು. ಪದ್ದುನ ಕಲ್ಪನೆಯ ಮೀನಾ ಕಾಲೇಜಿನದ್ದೆ. ಮುದ್ದು ಮುಖ, ಉದ್ದ ಜಡೆ... ಆಕರ್ಷಿಸುವ ಕಂಗಳು... ಅವಳ ಒಂದು ಕರೆಯಿಂದ ಥ್ರಿಲ್ ಆದ ಪದ್ದು ಕಾಲೇಜಿನಲ್ಲಿ ಕೊನೆಯಾಗಿದ್ದ ಕಾವ್ಯತ್ವವನ್ನು ಹೊರತೆಗೆದ. ನಿತ್ಯ ಒಂದು ಹೊಸ ಕವಿತೆ ಮೀನಾಳಿಗಾಗಿ ಬರೆಯತೊಡಗಿದೆ. ‘ವಾಟ್ ಎ ಬ್ಯೂಟಿಫುಲ್ ರೈಟಿಂಗ್. ಐ ಲೈಕ್ ಇಟ್, ಲವ್ ಇಟ್...’ ಅಂತ ಮೆಸೇಜ್ ಬಂದಿದ್ದೆ ತಡ, ಬರವಣಿಗೆ ಓತಪ್ರೋತವಾಯಿತು. ಆತ್ಮೀಯತೆ ಹೆಚ್ಚುತ್ತಾ ಹೋಯಿತು. ಚಾಟಿಂಗ್ ಎಲ್ಲೆ ಮೀರದಂತೆ ನಡೆದಿತ್ತು. ಕೆಲಸದ ಮೇಲೆ ಪದ್ದು ದೆಹಲಿಗೆ ಹೋಗಿದ್ದಾಗ ಬೆಂಗಳೂರಿಗೆ ಮೀನಾ ಬಂದಿದ್ದಳು. ಮನೆಗೂ ಬಂದು ಹೋಗಿದ್ದಳು. ಪದ್ದು ತಡವರಿಸಿದ್ದು ಅಷ್ಟಿಷ್ಟಲ್ಲ.

‘ಏನ್ರಿ ನಾನು ಇಲ್ಲದಾಗ ಬಂದುಬಿಟ್ರೆ...’ ಎಂದು ಜಗಳಾನೂ ತೆಗೆದು ಮಾತು ಬಿಟ್ಟಿದ್ದ.

‘ಇನ್ನೊಮ್ಮೆ ನಾನು ಇರುವಾಗ ಬರಬೇಕು’ ಎನ್ನುವ ಒತ್ತಾಯಕ್ಕೆ ಮತ್ತೆ ಗೆಳೆತನ ಮುಂದುವರೆದಿತ್ತು. ಫೋನ್ ಬೆಸೆದ ಹಳೆಯ ಬಾಂಧವ್ಯ ಒಂದು ಹೊಸ ಕನಸನ್ನೆ ಸೃಷ್ಟಿಸಿತ್ತು. ಪರಸ್ಪರ ಭೇಟಿಯಾಗುವ ದಿನ ಬಂದೇಬಿಟ್ಟಿತು. ಬೆಂಗಳೂರಿಗೆ ಮದುವೆಗಾಗಿ ಬರುತ್ತಿದ್ದೇನೆ ಎನ್ನುವ ಮೆಸೇಜ್ ಬಂದಿದ್ದೆ ತಡ ಥ್ರಿಲ್ ಆದ. ಖುಷಿಯಿಂದ ‘ಪಮ್ಮಿ ನಾಳೆ ಮೀನಾ ಬರತಾಳಂತೆ’ ಎಂದು ಓಡೋಡಿ ಬಂದು ಹೇಳಿದ.

‘ಹೌದು ನನಗೆ ಗೊತ್ತು’

‘ಹಾಂ! ಹೇಗೆ...?’

‘ಕಾಲ್ ಮಾಡಿ ಹೇಳಿದ್ದಾಳೆ’.

‘ನಿನಗೆ ಏನು ಅನಿಸಲಿಲ್ವಾ?’

‘ಏನು ಅನಿಸಬೇಕು...? ಒಳ್ಳೆಯವರಿದ್ದಾರೆ. ಯು ನೋ ವಿ ಆರ್ ಗುಡ್ ಫ್ರೆಂಡ್ಸ್. ಲಾಸ್ಟ್ ಟೈಮ್ ಬೆಂಗಳೂರಿಗೆ ಬಂದಾಗ ಸಖತ್ ಕಂಪನಿ ಕೊಟ್ರು’.

‘ಯೂ ಆರ್ ಲಕ್ಕಿ. ನಾನು ಇರಲಿಲ್ಲ ಅಲ್ಲ. ನಾಳೆ ಬರತಾರಂತೆ.’

‘ಬರಲಿ, ಏನೇನು ಮಾಡಬೇಕು ಹೇಳಿ ಮಾಡುವೆ.’

‘ಮಾಡುವಿಯಂತೆ. ಒಂದು ಕೇಳಲಾ. ನಾನು ಹೇರ್ ಡ್ರೈ ಮಾಡಿಕೊತೀನಿ. ಫೇಸ್‌ವಾಶ್ ಮಾಡಿಸಿಕೊಂಡು ಬರತೀನಿ...’

‘ಅಯ್ಯೋ ಅಷ್ಟ್ಯಾಕೆ ಕೇಳತಿರಿ. ನಾನೇ ಹೇರ್ ಡ್ರೈ ಮಾಡ್ತೀನಿ’ ಅಂತ ಮಾಡಿದಳು. ‘ಬೇಕಾದ್ರೆ ಪಾರ್ಲರ್‌ಗೆ ಹೋಗಿ ಬನ್ನಿ’ ಎಂದು ಕಳಿಸಿಕೊಟ್ಟಳು.

ಪದ್ದು ಕಕ್ಕಾಬಿಕ್ಕಿ. ಒಂದು ಕೂದಲು ಸಿಕ್ರೆ ವಾರಗಟ್ಟಲೆ ವಿಚಾರಣೆಗೆ ಒಳಪಡಿಸುತ್ತಿದ್ದವಳು. ಇವಳಾ?

‘ಮೀನಾ, ನೀನು ಗ್ರೇಟ್ ಒಂದೆ ಭೇಟಿಯಲ್ಲಿ ಏನೆಲ್ಲಾ ಬದಲಾವಣೆ ಮಾಡಿಯೇ?’ ಎಂದು ಕರೆ ಮಾಡಿ ಹೇಳಿದ್ದ, ‘ಇಲ್ಲಾ ಪದ್ದು. ನಿಮ್ಮ ಮಿಸೆಸ್ ಸಿಂಪಲಿ ಗ್ರೇಟ್’ ಅಂದಿದ್ದಳು.

‘ಹೋ ಹೋ ಇಬ್ಬರ ನಡುವೆ ಹೊಂದಾಣಿಕೆ ನಮಗೆ ಅನುಕೂಲ’ ಎಂದು ಮುಸಿಮುಸಿ ನಕ್ಕಿದ್ದ.

ಸಲೂನ್ ಹೋಗಿ ಬಂದ ಪದ್ದುರಾಯರನ್ನು ಪಮ್ಮಿ ಗುರುತಿಸಲಾರಲಾದಳು.

‘ನಮ್ಮ ಮದುವೆಯಲ್ಲೂ ಅಷ್ಟು ತಯಾರಾಗಿರಲಿಲ್ಲ. ಇಂದು ಹಳೆಯ ಸ್ನೇಹಿತೆ ಬರತಾಳೆ ಅಂದ್ರೆ ಎಷ್ಟು ಚಂದ ಸಿದ್ದರಾಗಿರಿ’ ಎಂದು ಮೂಗು ಮುರಿದಳು. ‘ಸಲೂನ್ ಹುಡುಗ ಮಾಡಿದ್ದು, ನಾನು ಶೇವಿಂಗ್ ಅಷ್ಟೆ ಮಾಡಂತ ಹೇಳಿದ್ದೆ’ ಎಂದು ಡೈವರ್ಟ್ ಮಾಡಿ ಮೆಲ್ಲನೆ ಕನ್ನಡಿ ನೋಡಿಕೊಂಡು... ತನ್ನನ್ನೆ ತಾನು ನಂಬದಾದ... ಇಪ್ಪತ್ತು ವರ್ಷ ಹಿಂದೆ ಹೋದ ಮೇಕಪ್ ಆಗಿತ್ತು. ಒಳೊಳಗೆ ಖುಷಿಪಟ್ಟ. ಮಧ್ಯಾಹ್ನದ ಊಟಕ್ಕೆ ಬರತೀನಿ ಅಂದಿದ್ರು. ಅಂದು ಯಾಕೊ ಸಮಯ ಓಡಲಿಲ್ಲ. ಒಂದು ತಾಸು ವರ್ಷವಾದಂತೆ ಭಾಸವಾಗತೊಡಗಿತು. ‘ಟೈಮು ಓಡ್ತಾ ಇಲ್ಲ’ ಎಂದು ತಡವರಿಸಿದ. ಬೋನಿನಲ್ಲಿ ಹಾಕಿದ ಹುಲಿಯಂತೆ ಅತ್ತ ಇತ್ತ ಓಡಾಡತೊಡಗಿದೆ.

‘ಯಾಕ ಅಷ್ಟು ಅವಸರ ಮಾಡ್ತೀರಿ ತಾಳಿ, ಬರತಾರೆ. ನನಗಾಗಿ ಇಷ್ಟು ತಡವರಿಸಿದ್ದೀರಾ?’ ಎಂದು ಕೊಂಕು ನುಡಿದಳು. ಪದ್ದುಗೆ ನಿಜ ಅನಿಸ್ತು. ಹೌದಲ್ಲ ಎಂದು ಫ್ಲಾಶ್ ಬ್ಯಾಕಿಗೆ ಹೋದಾಗಲೇ ಕಾರ್ ಸಪ್ಪಳ ಆಯ್ತು.

‘ಬಂದ್ರು ನೋಡ್ರೀ’ ಎಂದು ಪಮ್ಮಿ ಕರೆದಳು.

‘ನಾನು ಒಳಗಿರತೀನಿ ನೀನು ಕರಕೊಂಡು ಬಾ’ ಎಂದು ಒಳಹೋದ. ಒಳಗೆ ಬಂದದ್ದಾಯಿತು. ಆ ಧ್ವನಿ ಕೇಳತಾ ಪುಳಕಿತನಾಗುತ್ತಿದ್ದ. ‘ಎಲ್ಲಿ ನಿಮ್ಮನೆಯವರು ಕಾಣ್ತಾನೆ ಇಲ್ಲ’ ಎಂದು ಧ್ವನಿ ಬಂದಿದ್ದೇ ತಡ. ಪದ್ದು ಹಾಲ್‌ನಲ್ಲಿ ಕಾಲಿಟ್ಟ ರೋಮಾಂಚನದಿಂದ.

‘ಹೋ ಪದ್ದು ಹೌ ಆರ್ ಯೂ?’ ಎಂದು ಧ್ವನಿ ಬಂದ ಮೀನಾಳತ್ತ ದೃಷ್ಟಿ ಬೀರಿದ.

‘ಫೈನ್’ ಅಂತ ಹಾಗೆ ನಿಂತ.

‘ಏನ್ರಿ ಹೇಗಿದ್ದವರು ಹಾಗೆ ಇದ್ದೀರಿ. ಅದೆ ಡೈನಾಮಿಕ್ ಪರ್ಸನಾಲಟಿ’ ಎಂದು ಕೈಕುಲುಕಿದಳು.

ಪದ್ದುಗೆ ಮಾತು ಹೊರಡಲಿಲ್ಲ.

ಪದ್ದು ‘ಯಾಕ್ರಿ ಹಾಗೆ ನಿಂತ್ರಿ?’ ಎಂದ್ಲು ಮೀನಾ.

‘ಬಹಳ ದಿನದ ಮೇಲೆ ನೋಡಿದ್ದಾರಲ್ಲ. ಮಾತು ಬರುತ್ತಿಲ್ಲ ರಾಯರಿಗೆ. ಹೌದಲ್ರಿ?’ ಎಂದು ಪಮ್ಮಿ ತಿವಿದಳು.

‘ಎಸ್ ಪದ್ದು. ನಾವು ನೋಡಿ ಹೇಗಾಗಿ ಬಿಟ್ಟಿವಿ. ನಿಮ್ಮನ್ನ ನೋಡಿದ್ರೆ ಸಂಕಟ ಆಗುತ್ತಪ’ ಪದ್ದುಗ ನಿಜಕ್ಕೂ ಸಂಕಟ ಪಡೋ ಸಮಯ ಅದಾಗಿತ್ತು. ತನ್ನ ಕಲ್ಪನೆಯ ಮೀನಾ ಆಗಿರಲಿಲ್ಲ. ಉದ್ದ ಕೂದಲು ಹೋಗಿ ಚೋಟಾಗಿತ್ತು. ಹೊಳೆಯುವ ಕಂಗಳು ಬತ್ತಿದ ಬಾವಿಯಂತಾಗಿದ್ದವು. ತುಂಬಿದ ಗಲ್ಲ ಒಳ ಸೇರಿದ್ದವು. ಹಲ್ಲು ಬಿದ್ದ ಅರ್ಧ ಬೊಚ್ಚಾಗಿತ್ತು. ಶರೀರ ಬಡಕಲಾಗಿತ್ತು. ಚರ್ಮ ಸುಕ್ಕುಗಟ್ಟಿತ್ತು.

‘ಮಾತಾಡಿ ಪದ್ದು, ಫೋನ್‌ನಲ್ಲಿ ಏನೆಲ್ಲ ಮಾತಾಡತಿದ್ರಿ...? ಎಂದು ಮೀನಾ ಒತ್ತಾಯಿಸಿದಳು. ಪಮ್ಮಿ ಮುಸಿ ಮುಸಿ ನಗುತ್ತಾ ‘ಇವರೆಲ್ಲಿ ಮಾತಾಡತಾರಿ, ಮೊದಲಿಂದಲೂ ಹಾಗೆ ಮೌನಿ ಬಾಬಾ’ ಎಂದು ‘ನಾನು ಊಟಕ್ಕ ಅರೇಂಜ್ ಮಾಡ್ತೀನಿ’ ಅಂತ ಒಳಹೋದಳು. ಮೀನಾ ಖುಷಿ ಖುಷಿಯಿಂದ ಮಾತಾಡತಿದ್ರು. ಪದ್ದುನು ಮಾತಾಡಿದ. ಆದರೆ, ಕನಸಿನ ಕಟ್ಟೆ ಒಡೆದು ಹೋಗಿತ್ತು. ಆದರೂ ಮಾತಾಡಿದ ಹಳೆಯ ನೆನಪುಗಳನ್ನು ಹಂಚಿಕೊಂಡ. ಕಾಲೇಜಿನಲ್ಲಿ ಸೊಕ್ಕಿನಿಂದ ಮೆರೆದ ಮೀನಾ ಈಕಿನಾ ಅಂತ ಅಚ್ಚರಿಗೊಂಡ. ಹೋಗುವಾಗ ಮೀನಾ ಖುಷಿಯಿಂದ ಟಾಟಾ ಮಾಡಿದಳು. ಪಮ್ಮಿಯ ಪದ್ದುನ ಕೈ ಹಿಡಿದು ಟಾಟಾ ಮಾಡಿಸಿದಳು.

ಪಮ್ಮಿಯ ಗೆಲುವಿನ ಗುಟ್ಟು ರಟ್ಟಾಗಿತ್ತು. ಅಂದಿನಿಂದ ಪಮ್ಮಿಗೆ ಮೀನಾ ಪದ್ದುನ ರೇಗಿಸುವ ವಸ್ತುವಾದಳು.

ಪ್ರತಿಕ್ರಿಯಿಸಿ: feedback@sudha.co.in